## ಚಕ್ಕುಲಿ ಎಂದರೆ...

ಬೆಂಗಳೂರಿನ ನನ್ನ ಮಗಳ ಮನೆಗೆ ಹೋದಾಗ ನಡೆದ ಘಟನೆ. ಸಂಜೆ ಮನೆಯಲ್ಲಿ ಚಕ್ಕುಲಿ ಮೆಲ್ಲುತ್ತಾ ಟೀವಿ ನೋಡುತ್ತಿದ್ದೆ. ಪಕ್ಕದ ಮನೆಯ ಗುಜರಾತಿ ಕುಟುಂಬದ ಆರು ವರ್ಷದ ಮಗು ಬಂದಿತು. ಆ ಮಗುವಿಗೂ ಒಂದು ಚಕ್ಕುಲಿಯ ಸುರುಳಿ ಕೊಟ್ಟೆ. ಅದು ನಿಧಾನವಾಗಿ ತಿನ್ನುತ್ತಾ, 'ಇಸ್ಕೋ ಕ್ಯಾ ಕಹತೇ ಹೈ?' ಎಂದಿತು, 'ಚಕ್ಲಿ' ಎಂದೆ. ಮಗು ಒಮ್ಮೆಲೇ ಶಾಕ್ ಆದಂತೆ ಅದನ್ನು ನೆಲಕ್ಕೆ ಬಿಸಾಕಿ ಹೊರಗೆ ಓಡಿತು. ನಾನು ದಿಗ್ಭ್ರಾಂತನಾದೆ. ಸಂಜೆ ಮಗಳು ಮನೆಗೆ ಬಂದ ಮೇಲೆ ತಿಳಿಯಿತು. ಗುಜರಾತಿ ಭಾಷೆಯಲ್ಲಿ 'ಚಕ್ಲಿ' ಎಂದರೆ 'ಗುಬ್ಬಚ್ಚಿ' ಎಂದರ್ಥವಂತೆ.

**ಕೆ. ಶ್ರೀನಿವಾಸರಾವ್**



## ಹೆಸರಿನ ಫಜೀತಿ!

ಸುಮಾರು ವರ್ಷಗಳ ಹಿಂದೆ. ಎಂಟನೇ ತರಗತಿಗೆ ಸೇರಿದಾಗ ಎಲ್ಲಾ ಹೊಸ ಮುಖಗಳು, ಹೊಸ ಶಾಲೆ, ಹೊಸ ಶಿಕ್ಷಕರು. ಮೊದಲ ದಿನ ಕನ್ನಡ ಟೀಚರ್ ಬಂದು ಎಲ್ಲರೂ ನಿಮ್ಮ ನಿಮ್ಮ ಹೆಸರು ಹೇಳಿ ಅಂದರು. ಎಲ್ಲರೂ ತಮ್ಮ ತಮ್ಮ ಹೆಸರು ಹೇಳುತ್ತಾ ಹೋದಾಗ, 'ಚರಂಡಿ, ಫ್ರಂ ಗದಗ' ಎನ್ನುವ ಹೆಸರು ಕೇಳಿ ಕ್ಷಣ ಎಲ್ಲರೂ ಒಮ್ಮೆಲೇ ಕತ್ತೆತ್ತಿ ಅವನ ಮುಖ ನೋಡಿದೆವು. ನಮ್ಮ ಟೀಚರ್ ಸಹ ಮುಖ ಸಿಂಡರಿಸಿ, 'ಏನೊ ಅದು? ಇನ್ನೊಮ್ಮೆ ಹೇಳು' ಎಂದರು. ಆತ, 'ಚರಂಡಿ' ಎಂದ. ಎಲ್ಲರೂ ಕಿಸಿಕಿಸಿ ನಗಲಾರಂಭಿಸಿದರು. 'ಬಾರೊ ಇಲ್ಲಿ, ನಿನ್ನ ಹೆಸರು ಬರಿ ಬೋರ್ಡ್ ಮೇಲೆ' ಎಂದರು. ಆತ ಎದ್ದು ಹೋಗಿ ತನ್ನ ಹೆಸರು ಬರೆದ–Charan D.

**ಕಾವ್ಯಾ ಶಿವಾನಂದ**



ಕಲೆ: ಗಣೇಶ ಆಚಾರ್ಯ